ಎಂ ವಿ ಸಿ ನಂ.419/2020
ಆರ್ .ಡಬ್ಲು- 1

ದಿನಾಂಕಃ 07-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎದುರುದಾರ ನಂ.2 ಪರ ಶ್ರೀ. ಎನ್ ಡಿ ವಕೀಲರಿಂದ.**

ನಾನು ನನ್ನ ಮುಖ್ಯ ವಿಚಾರಣೆಯ ಭಾಗಾಂಶವಾಗಿ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತವೆ.

ನಮ್ಮ ವಿಮಾ ಕಂಪನಿಯವರು ನನಗೆ ಸಾಕ್ಷ್ಯ ನುಡಿಯಲು ನೀಡಿದ ಅಧಿಕಾರ ಪತ್ರ ಹಾಜರುಪಡಿಸಿರುತ್ತೇನೆ ಅದನ್ನು ನಿಆರ್ -1 ಎಂದು ಗುರುತಿಸಲಾಯಿತು. 2 ವಿಮೆ ಪತ್ರ, ಮೋಟಾರು ವಾಹನ ಕಾಯ್ದೆ ಕಲಂ 133ರ ಅಡಿಯಲ್ಲಿ ನಿಡಿದ ನೋಟಿಸು ಅದಕ್ಕೆ ಎದುರುದಾರ ನಂ.1 ಇವರು ನೀಡಿದ ಉತ್ತರದ ದೃಢಿಕೃತ ನಕಲು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಆರ್ 2 ರಿಂದ 4 ಎಂದು ಗುರುತಿಸಲಾಯಿತು. 2ನೇ ಎದುರುದಾರರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹುಣಸೂರು ಇವರಿಗೆ ನೀಡಿದ ನೋಟಿಸು ಅದು ಜಾರಿಯಾದ ಬಗ್ಗೆ ಅಂಚೆ ಸ್ವಿಕೃತಿ ಪತ್ರ ಅಂಚೆ ರಶೀದಿ ಅವುಗಳನ್ನು ನಿಆರ್ -5 ಮತ್ತು 6 ಎಂದು ಗುರುತಿಸಲಾಯಿತು. ಲಾರಿಯ ಮಾಲೀಕರು 1ನೇ ಎದುರುದಾರರಿಗೆ ನಿಡಿದ ನೋಟಿಸು ಅದು ಜಾರಿಯಾದ ಬಗ್ಗೆ ಅಂಚೆ ಸ್ವಿಕೃತಿ ಪತ್ರ ಅಂಚೆ ರಶೀದಿ ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಆರ್ 7 ಮತ್ತು 8 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಕೋರಲಾದಂತೆ ಅರ್ಜಿಯನ್ನು ಖರ್ಚು ಸಹಿತ ಮಂಜೂರು ಮಾಡಲು ಪ್ರಾರ್ಥಿಸುತ್ತೇನೆ.

ಎಂ ವಿ ಸಿ ನಂ.419/2020<br>ಆರ್ .ಡಬ್ಲ್ಯು- 1

**<u>ಪಾಟೀಸವಾಲುಃ-</u> ಎದುರುದಾರ ನಂ.6 ಪರ ಎ ಎಸ್ ಪಿ ವಕೀಲರಿಂದ ಃ**

ಪೋಲಿಸರು ವಾಹನ ಸಂಖ್ಯೆ ಕೆಎ-04/ಸಿ-6479 ವಾಹನದ ಮೇಲೆ ಯಾವುದೇ ದೋಷಾರೋಪಣೆ ಪಟ್ಟಿ ಸಲ್ಲಿಸಿಲ್ಲ ಎಂದರೆ ಸರಿ. ಸದರಿ ವಾಹನದ ಚಾಲಕರು ಸಂಚಾರಿ ನಿಯಮ ಉಲ್ಲಂಘನೆ ಮಾಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ವಾಹನದ ಮಾಲೀಕರು ಪರಿಮಿಟ ಶರತ್ತುಗಳನ್ನು ಉಲ್ಲಂಘನೆ ಮಾಡಿಲ್ಲ ಎಂದರೆ ಸರಿಯಲ್ಲ. ಪೋಲಿಸುರ ತನಿಖೆ ಕೈಗೊಂಡು ವಾಹನ ಸಂಖ್ಯೆ ಕೆಎ-40 ಎ/0667 ವಾಹನದ ಮೇಲೆ ಅದರ ಚಾಲಕ ದುಡುಕುತನದಿಂದ ವಾಹನ ಚಾಲನೆ ಮಾಡಿರುವುದಾಗಿ ಆಪಾದಿಸಿ ದೋಷಾರೋಣ ಪಟ್ಟಿ ಸಲಸಿರುತ್ತಾರೆ ಎಂದರೆ ಸರಿಯಲ್ಲ . ಆದ್ದರಿಂದ ಎದರುದಾರ ನಂ.6 ಇವರು ಅಪಘಾತಕ್ಕೆ ಸಂಬಂಧಿಸಿದಂತೆ ಅರ್ಜಿದಾರರ ಮೇಲೆ ಯಾವುದೇ ಹೊಣೆಗಾರಿಕೆ ಹೊಂದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ- ಅರ್ಜಿದಾರ ಪರ </u>ವಕೀಲರಿಂದ**

ಅರ್ಜಿದಾರರು ಹಾಜರು ಇರುವುದಿಲ್ಲ. ಯಾವುದೇ ಪ್ರತಿನಿದಿತ್ವ ಇಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು<br>ಜೆ ಎಮ್ ಎಫ್ ಸಿ, ಶಿಗ್ಗಾಂವ.<br>(ಸ್ಥಳಃ ಸವಣೂರ).

ಎಂ ವಿ ಸಿ ನಂ.419/2020
ಆರ್ .ಡಬ್ಲು- 1